ಉಪಾಧ್ಯಕ್ಷರಾಗಿ ತಮ್ಮ ಸ್ಥಳದಲ್ಲಿಯೇ ಕುಳಿತಿದ್ದರು. 1967 ರಲ್ಲಿ ನಾನು ಸದಸ್ಯನಾಗಿ ಇಲ್ಲಿದ್ದಾಗ, ಅವರು ಸುಮಾರು ಒಂದು ವರ್ಷ ಅಧ್ಯಕ್ಷರಾಗಿದ್ದರು. ವೈಕುಂಠ ಬಾಳಿಗಾರವರಿಗೆ ಅನಾರೋಗ್ಯವಾಗಿದ್ದಾಗ ಸುಮಾರು ಒಂದು ವರ್ಷ ಕಾಲ ಅಧ್ಯಕ್ಷರಾಗಿದ್ದರು. ಕೊಳ್ಳೇಗಾಲದ ಮಸಣ ಶೆಟ್ಟರನ್ನು ಅವರು ನೋಡಿದ್ದಾರೆ. ಈಗ ನನಗನ್ನಿಸುತ್ತಿದೆ, ಸರ್ಕಾರದ ನೀತಿ ಪ್ರಾಮಾಣಿಕವಾಗಿಲ್ಲ. ಅವರು ಸರ್ಕಾರಕ್ಕೆ ಮನವಿ ಕೊಟ್ಟರಲ್ಲಾ, ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ಇದುವರೆಗೆ ನೀವು ಏಕೆ ತೀರ್ಮಾನ ತೆಗೆದುಕೊಳ್ಳಲಿಲ್ಲ? ಆದ್ದರಿಂದ, ಸರ್ಕಾರದ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಆ ಜನಾಂಗದ ಬಗ್ಗೆ ನಿಮಗೆ ಪ್ರಾಮಾಣಿಕತೆಯಿಲ್ಲ.

ಶ್ರೀ ಎಂ.ಪಿ.ವೆಂಕಟೇಶ್ : ನಿಮ್ಮ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಾರೆ. ನೀವೇಕೆ ವಾಕೌಟ್ ಮಾಡಬೇಕು? ನೀವು ಮುಖ್ಯಮಂತ್ರಿಗಳ ಮನವೊಲಿಸಿ. ನಿಮ್ಮ ಮಾತನ್ನು ಅವರು ಕೇಳುತ್ತಾರೆ. ಅದನ್ನು ಬಿಟ್ಟು ನೀವು ಮುಖ್ಯಮಂತ್ರಿಗಳು ಇಲ್ಲದಿದ್ದಾಗ ವಾಕೌಟ್ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನೀವು ಏನು ಹೇಳಿದರೂ ಆಗುವುದಿಲ್ಲ. ಗಾಣಗಿತ್ತಿ ಅಯ್ಯೋ ಎಂದರೆ ಮಗುವಿನ ತಲೆಯ ಮೇಲೆ ಎಣ್ಣೆ ಬರುವುದಿಲ್ಲ. ಮಗುವಿನ ತಲೆಗೆ ಎಣ್ಣೆ ಹಾಕುವವರೆಗೂ ನತ್ತಿ ತಣ್ಣಗಾಗುವುದಿಲ್ಲ. ಹಾಗಾಗಿ, ಬರೀ ಒಣ ಪ್ರಸಂಗದ ಮಾತುಗಳನ್ನು ಹೇಳಬೇಡಿ. ಇವರ ಬಗ್ಗೆ ಒಂದು ಪ್ರಾಮಾಣಿಕತೆ ಇಲ್ಲ ಎದ್ದು ಕಾಣುತ್ತಿಲ್ಲ. ಪ್ರಮಾಣಿಕತೆ ಬೇಕು. ನಿಮ್ಮ ಪ್ರಾಮಾಣಿಕತೆಯನ್ನೇ ನಾನು ನೇರವಾಗಿ ಪ್ರಶ್ನೆ ಮಾಡುತ್ತಿದ್ದೇನೆ. ಹೆಚ್ಚು ಮಳೆ ಬಂದರೆ ಅವರು ಉಳಿಯುವುದಕ್ಕಾಗುವುದಿಲ್ಲ. ಬೆಂಕಿ ಬಿದ್ದರೆ ಉಳಿಯುವುದಕ್ಕಾಗುವುದಿಲ್ಲ. ಮಳೆಯಲ್ಲಿ ನೆನೆಯುತ್ತಿದ್ದಾರೆ ಬೆಂಕಿ ಬಿದ್ದರೆ, ಆ ಗುಡಿಸಲುಗಳು ಉಳಿಯುವುದಿಲ್ಲ. ಈ ಪರಿಸ್ಥಿತಿ ಬಹಳ ವರ್ಷಗಳಿಂದ ಇದೆ. ಹಿಂದೆ, ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾಗಿದ್ದಾಗಲೂ, ಅವರಿಗಾಗಿ ನೆರಳಿನ ಭಾಗ್ಯ ಎನ್ನುವ ಯೋಜನೆಯನ್ನು ಮಾಡಿ ಎಂದು ಹೇಳಿದ್ದೆ. ಈಗಲಾದರೂ ಆ ಜನಾಂಗಕ್ಕೆ ನೆರಳಿನ ಭಾಗ್ಯ ಎಂದು ಮಾಡಿ, ಈ ವರ್ಷ ಕನಿಷ್ಟ 10 ಸಾವಿರ ಮನೆಗಳನ್ನು ಅವರಿಗೆ ಕೊಡಿ. ಆ ಜನಾಂಗಕ್ಕೆ ನಾವು ಇಷ್ಟೂ ಕೊಡಲು ಆಗುವುದಿಲ್ಲವೆಂದರೆ, ಇದು ನಿಜಕ್ಕೂ ನನಗೆ ಬಹಳ ನೋವೆನಿಸುತ್ತದೆ. ಇದನ್ನು ಹೇಳಿ, ನಾನು ಅತ್ಯಂತ ನೋವಿನಿಂದ ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್ : ನಿಮ್ಮ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಾರೆ, ನೀವೇಕೆ ಹೋಗುತ್ತಿದ್ದೀರಿ? ಇದು ಸರಿಯಿಲ್ಲ. ನೀವು ವಾಕೌಟ್ ಮಾಡಿದರೆ ಹೇಗೆ?

ಶ್ರೀ ಅಂಜನಮೂರ್ತಿ : ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು.....

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್ : ಆ ಜನಾಂಗಕ್ಕೆ ತೊಂದರೆಯಾಗದ ರೀತಿ ನೀವು ಮುಖ್ಯಮಂತ್ರಿಗಳ ಮನವೊಲಿಸಿ.

ಶ್ರೀ ವಾಟಾಳ್ ನಾಗರಾಜ್ : ನೀವು ಸರ್ಕಾರದ ವಕ್ತಾರರೇ? ಆ ಜನಾಂಗದ ಪರಿಸ್ಥಿತಿ ಏನು ಎನ್ನುವುದು ನನಗೆ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ ಅವರ ಪಾದಸೇವೆ ಮಾಡುತ್ತಿದ್ದೇವೆ ನಾವು. ಅವರ ಪರಿಸ್ಥಿತಿ ನನಗೆ ಗೊತ್ತಿದೆ.

ಉಪಾಧ್ಯಕ್ಷರು : ಅಂಜನಾಮೂರ್ತಿಯವರೇ, ಈ ಸಬ್ಜೆಕ್ಟ್ ನಿಮ್ಮದಲ್ಲ. ಇದು ಮಂಜುನಾಥ್‌ರವರು ಹೇಳಬೇಕಾಗಿರುವಂಥಾದ್ದು, ನೀವು ಕುಳಿತುಕೊಳ್ಳಿ.

ಶ್ರೀ ಅಂಜನಾಮೂರ್ತಿ : ನಮ್ಮ ಉತ್ತರವನ್ನು ಕೇಳುವಷ್ಟೂ ಸಂಯಮ ಇಲ್ಲವೆಂದರೆ, ವಾಟಾಳ್ ನಾಗರಾಜ್‌ರವರು ಸುಮ್ಮನೆ ಪ್ರಚಾರಕ್ಕೋಸ್ಕರ ಮಾತನಾಡುತ್ತಿದ್ದಾರೆ ಅಷ್ಟೇ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಸಭಾತ್ಯಾಗ ಮಾಡಿದರು)

ಡಾ: ಎಂ.ಸಿ.ಸುಧಾಕರ : ಮಾನ್ಯ ಉಪಾಧ್ಯಕ್ಷರೇ, ವಾಕೌಟ್ ಮಾಡುವವರು ಮಾಡಲಿ ಬಿಡಿ.

ಶ್ರೀ ಅಂಜನಾಮೂರ್ತಿ : ಅವರು ಕೇವಲ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ, ಅವರಿಗೆ ಆ ಜನಾಂಗದವರ ಬಗ್ಗೆ ನಿಜವಾಗಿ ಕಾಳಜಿ ಇಲ್ಲ ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಆಯಿತಲ್ಲಾ ಬಿಡಿ. ಈಗ ಮುಂದಕ್ಕೆ ಹೋಗೋಣ. ಈಗ ಎ.ಟಿ.ರಾಮಸ್ವಾಮಿಯವರು.

(ಆ) ವಿಷಯ: ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರವೇಶಾವಕಾಶವನ್ನು ವ್ಯಾಪಾರೀಕರಣ ಗೊಳಿಸಿರುವುದರಿಂದ, ಅರ್ಹ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.